# ಪೇಮೆಂಟ್ ಆ್ಯಪ್ ಬಳಸಿ, ಎಟಿಎಂನಲ್ಲಿ ವಿತ್‌ಡ್ರಾ ಮಾಡಿ




ಚಿತ್ರಕೃಪೆ ಟ್ವಿಟರ್

**ಎಟಿಎಂ ವಹಿವಾಟಿಗೆ ಭಾರಿ ಪೆಟ್ಟು ನೀಡಿದ್ದ ಡಿಜಿಟಲ್ ಪೇಮೆಂಟ್ ಆ್ಯಪ್‌ಗಳು ಈಗ ಎಟಿಎಂ ಒಳಗೂ ನುಸುಳಿ ತಮ್ಮ ಪ್ರಾಬಲ್ಯ ಮೆರೆಯಲು ಮುಂದಾಗಿವೆ.**

**■ ಶಶಿಕುಮಾರ್ ಸಿ.**

ಹಣ ಸಂದಾಯ ವಿಧಾನವನ್ನು ನಗದುರಹಿತಗೊಳಿಸಿದ್ದ ಪೇಮೆಂಟ್ ಆ್ಯಪ್‌ಗಳು ಕಾರ್ಡ್‌ರಹಿತವಾಗಿ ಎಟಿಎಂಗಳಲ್ಲಿ ಹಣ ವಿತ್‌ಡ್ರಾ ಮಾಡುವ ಆಯ್ಕೆಯನ್ನು ಪರಿಚಯಿಸಲು ಮುಂದಾಗಿವೆ. ಇದು ಪ್ರಾರಂಭದಲ್ಲಿ ಆಯ್ದ ಬ್ಯಾಂಕ್‌ಗಳ ಎಟಿಎಂಗಳಲ್ಲಿ ಮಾತ್ರ ಚಾಲ್ತಿಗೆ ಬರಲಿದ್ದು, ಅವಶ್ಯಕತೆಗನುಗುಣವಾಗಿ ಭವಿಷ್ಯದಲ್ಲಿ ಎಲ್ಲ ಬ್ಯಾಂಕ್‌ಗಳ ಎಟಿಎಂಗಳಿಗೆ ಪರಿಚಯಗೊಳ್ಳಲಿವೆ.

ಯುಪಿಐ (UPI) ಬಳಸಿಕೊಂಡು ಕಾರ್ಡ್‌ರಹಿತ ನಗದು ಹಿಂಪಡೆಯುವ ಸೌಲಭ್ಯವನ್ನು ಕಲ್ಪಿಸಿರುವ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಎಚ್‌ಡಿಎಫ್‌ಸಿ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಗ್ರಾಹಕರು ಯುಪಿಐ ಆಧಾರಿತ ಆ್ಯಪ್‌ಗಳನ್ನು ಬಳಸಿಕೊಂಡು ಸುರಕ್ಷಿತವಾಗಿ ಹಣ ವಿತ್‌ಡ್ರಾ ಮಾಡಲು ಅವಕಾಶ ಕಲ್ಪಿಸಿವೆ.

ಈ ಮೂರು ಬ್ಯಾಂಕ್‌ಗಳು ಪ್ರಸ್ತುತ ಕೆಲ ಆಯ್ದ ಎಟಿಎಂ ಕೇಂದ್ರಗಳ ಎಟಿಎಂ ಮಷಿನ್‌ಗಳಲ್ಲಿ ಯುಪಿಐ ಸ್ಕ್ಯಾನ್ ಆಯ್ಕೆಯನ್ನು ಪರಿಶೀಲಿಸುತ್ತಿವೆ. ಅದು ಯಶಸ್ವಿಯಾದ ಬಳಿಕ ಗೂಗಲ್ ಪೇ, ಪೇಟಿಎಂ, ಫೋನ್‌ಪೇಯಂತಹ ಯುಪಿಐ ಅಪ್ಲಿಕೇಷನ್‌ಗಳನ್ನು ಬಳಸಿಕೊಂಡು ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಇಲ್ಲದೆಯೇ ಎಟಿಎಂಗಳಿಂದ ಹಣ ಪಡೆಯಬಹುದು.

ಇಂತಹದ್ದೊಂದು ಪ್ರಸ್ತಾವನೆಯನ್ನು ಎನ್‌ಪಿಸಿಐ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮುಂದಿಟ್ಟಿತ್ತು. ಅದಕ್ಕೆ ಅನುಮೋದನೆಯನ್ನು ಆರ್‌ಬಿಐ ನೀಡಿದ್ದು, ಅದರ ಆಧಾರದ ಮೇಲೆ ಇಂಟರ್‌ಆಪರೆಬಲ್ ಕಾರ್ಡ್‌ಲೆಸ್ ಕ್ಯಾಷ್ ಹಿಂಪಡೆಯುವಿಕೆ (ಐಸಿಸಿಡಬ್ಲ್ಯು) ಎಂಬ ಹೊಸ ಫೀಚರ್ ಅನ್ನು ಡಿಜಿಟಲ್ ಪೇಮೆಂಟ್ ಆ್ಯಪ್‌ಗಳಲ್ಲಿ ಪರಿಚಯಿಸಲಾಗಿದೆ. ಅದಕ್ಕೆ ಪೂರಕವಾಗಿ ಎಟಿಎಂಗಳ ಸಾಫ್ಟ್‌ವೇರ್ ವ್ಯವಸ್ಥೆಯಲ್ಲೂ ಬದಲಾವಣೆ ತರಲಾಗಿದೆ.

ಜನಜೀವನದಲ್ಲಿ ಈಗಾಗಲೇ ಹಾಸುಹೊಕ್ಕಾಗಿರುವ ಪೇಮೆಂಟ್ ಆ್ಯಪ್‌ಗಳನ್ನು ಬಳಸಿಕೊಂಡು ಎಟಿಎಂ ಕೇಂದ್ರಗಳಲ್ಲಿ ಸುಲಭವಾಗಿ ಹಣವನ್ನು ವಿತ್‌ಡ್ರಾ ಮಾಡಬಹುದಾದ ಆಯ್ಕೆಯು, ಬ್ಯಾಂಕ್‌ಗಳು ಎಟಿಎಂಗಳಲ್ಲಿ ಈ ಹಿಂದೆಯೇ ಪರಿಚಯಿಸಿದ್ದ ಕಾರ್ಡ್‌ಲೆಸ್ ಕ್ಯಾಷ್ ಆಯ್ಕೆಗಿಂತ ಭಿನ್ನವಾದದ್ದು. ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳ ಪಾಸ್‌ವರ್ಡ್ ಮರೆತರೂ ಅಥವಾ ಕಳೆದುಕೊಂಡರೂ ಡಿಜಿಟಲ್ ಪೇಮೆಂಟ್ ಆ್ಯಪ್‌ಗಳ ಮೂಲಕ ಎಟಿಎಂ ಕೇಂದ್ರಗಳಲ್ಲಿ ಹಣ ವಿತ್‌ಡ್ರಾ ಮಾಡಬಹುದು.

ಎಟಿಎಂಗಳಲ್ಲಿ ಕಾರ್ಡ್ ರಹಿತ ನಗದು ಹಿಂಪಡೆಯುವ ಸೌಲಭ್ಯಗಳನ್ನು ಪರಿಚಯಿಸಿದ ನಂತರ ಬ್ಯಾಂಕ್‌ಗಳು ಡೆಬಿಟ್ ಕಾರ್ಡ್ ನೀಡುವುದನ್ನು ಮುಂದುವರೆಸುತ್ತವೆ. ಯುಪಿಐ ಆಧಾರಿತ ಆ್ಯಪ್‌ಗಳ ಮೂಲಕ ಎಟಿಎಂನಲ್ಲಿ ಹಣ ವಿತ್‌ಡ್ರಾ ಮಾಡುವ ಅವಕಾಶವು, ಸ್ಕಿಮ್ಮಿಂಗ್, ಕಾರ್ಡ್ ಕ್ಲೋನಿಂಗ್ ಸೇರಿದಂತೆ ಇತ್ಯಾದಿ ಹಣಕಾಸು ವಂಚನೆಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಈಚೆಗೆ ಹೇಳಿದ್ದರು.

### ಹಣ ವಿತ್‌ಡ್ರಾಗೆ ಹೀಗೆ ಮಾಡಿ...

- ನೀವು ಹೋಗಬಯಸುವ ಎಟಿಎಂ ಕೇಂದ್ರಗಳು ಯುಪಿಐ ವಿತ್‌ಡ್ರಾ ಸೇವೆ ಹೊಂದಿರುವ ಬಗ್ಗೆ ಖಾತರಿ ಮಾಡಿಕೊಳ್ಳಿ.
- ಎಟಿಎಂ ಮಷಿನ್‌ನ ಡಿಸ್‌ಪ್ಲೇಯಲ್ಲಿ ವಿತ್‌ಡ್ರಾ ಕ್ಯಾಷ್ (Withdraw Cash) ಆಯ್ಕೆ ಮೇಲೆ ಕ್ಲಿಕ್ಕಿಸಿ.
- ತೆರೆದುಕೊಳ್ಳುವ ಕ್ಯೂಆರ್ ಕೋಡ್ ಅನ್ನು ಪೇಮೆಂಟ್ ಆ್ಯಪ್ ಬಳಸಿ ಸ್ಕ್ಯಾನ್ ಮಾಡಿ.
- ನೀವು ಎಷ್ಟು ಹಣವನ್ನು ಹಿಂಪಡೆಯಲು ಬಯಸುತ್ತೀರಿ ಎಂಬುದನ್ನು ಅನುಕ್ರಮದ ಮೇಲೆ ನಮೂದಿಸಬೇಕು. (ಅಂದರೆ ನೀವು ನಮೂದಿಸಿದ ಹಣವು ಎಟಿಎಂನಲ್ಲಿ ವಿತ್‌ಡ್ರಾ ಆಗುವಂತಿರಬೇಕು)
- ನಂತರ ಅಗತ್ಯವಿರುವ ಹಣದ ಬಗ್ಗೆ ನಮೂದಿಸಿ ಎಂಟರ್ ಆಯ್ಕೆಯನ್ನು ಒತ್ತಿರಿ. ಇದಕ್ಕಾಗಿ, ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರುವ ಸ್ಮಾರ್ಟ್‌ಫೋನಿನಲ್ಲಿ ಯುಪಿಐ ಅಪ್ಲಿಕೇಷನ್‌ನಲ್ಲಿ ಸೇರಿಸಲಾಗಿರುವ ಬ್ಯಾಂಕ್ ಖಾತೆಯು ಸಕ್ರಿಯವಾಗಿರಬೇಕು.
- ಎಟಿಎಂನಲ್ಲಿ ಹಣವನ್ನು ವಿತ್‌ಡ್ರಾ ಮಾಡುವ ಕ್ರಮವು ಯಶಸ್ವಿಯಾದ ಬಳಿಕ ಸ್ಮಾರ್ಟ್‌ಫೋನಿನ 'ಗೌಪ್ಯ ಪಿನ್' ನಮೂದಿಸಬೇಕು.
- ನಿಮ್ಮ ಬ್ಯಾಂಕ್ ಖಾತೆಯಿಂದ ಯುಪಿಐ ಆಧಾರಿತವಾಗಿ ಹಣ ಪಾವತಿಯಾಗಿರುವ ಸಂದೇಶವು ಮೊಬೈಲ್‌ಗೆ ಬರಲಿದೆ. ನಂತರ ಎಟಿಎಂನಿಂದ ಹಣ ಹೊರಬರುತ್ತದೆ.
- ಯುಪಿಐ ಅಪ್ಲಿಕೇಷನ್‌ಗಳ ಸಹಾಯದಿಂದ ಒಂದು ವಹಿವಾಟಿನಲ್ಲಿ ₹5,000ವರೆಗೆ ವಿತ್‌ಡ್ರಾ ಮಾಡಬಹುದು. ■